# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **1247** |
| **ಮಾನ್ಯ ಸದಸ್ಯರ ಹೆಸರು** | : | **ಶ್ರೀ ಚಿದಾನಂದ್ ಎಂ. ಗೌಡ<br>(ಪದವೀಧರರ ಕ್ಷೇತ್ರ)** |
| **ಉತ್ತರಿಸುವ ದಿನಾಂಕ** | : | **21/08/2025** |
| **ಉತ್ತರಿಸುವ ಸಚಿವರು** | : | **ಗೃಹ ಸಚಿವರು** |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಕಳೆದ ಐದು ವರ್ಷದಲ್ಲಿ ದಾಖಲಾದ ಸೈಬರ್ ವಂಚನೆಯ ಪ್ರಕರಣಗಳೆಷ್ಟು; ವಂಚನೆಯ ಹಾಗೂ ಪತ್ತೆ ಮಾಡಿ ತಡೆಹಿಡಿದ ಹಿಂತಿರುಗಿಸಿದ ಮೊತ್ತವೆಷ್ಟು; (ವರ್ಷವಾರು ವಿವರ ನೀಡುವುದು)</td><td>ರಾಜ್ಯದಲ್ಲಿ ಕಳೆದ ಐದು ವರ್ಷದಲ್ಲಿ ದಾಖಲಾದ ಸೈಬರ್ ವಂಚನೆಯ ಮೊತ್ತ ಹಾಗೂ ಹಿಂದಿರುಗಿಸಲಾಗಿರುವ ಮೊತ್ತದ ವಿವರಗಳು ಈ ಕೆಳಕಂಡಂತಿದೆ:-
<table>
<tr><th>ವರ್ಷ</th><th>ಸೈಬರ್ ವಂಚನೆಯ ಪ್ರಕರಣಗಳ ಸಂಖ್ಯೆ</th><th>ವಂಚನೆಯ ಮೊತ್ತ ರೂ.ಗಳಲ್ಲಿ</th><th>ರಿಕವರಿ ಮೊತ್ತ ರೂ.ಗಳಲ್ಲಿ</th><th>ಹಿಂದಿರುಗಿಸಲಾಗಿರುವ ಮೊತ್ತ ರೂ.ಗಳಲ್ಲಿ</th></tr>
<tr><td>2020</td><td>10561</td><td>130,99,72,635</td><td>32,49,10,774</td><td>31,82,25,349</td></tr>
<tr><td>2021</td><td>7944</td><td>143,78,80,678</td><td>32,08,09,145</td><td>29,13,83,223</td></tr>
<tr><td>2022</td><td>12344</td><td>354,02,35,999</td><td>73,96,48,251</td><td>66,80,33,648</td></tr>
<tr><td>2023</td><td>21640</td><td>861,14,02,476</td><td>172,63,90,417</td><td>136,05,04,442</td></tr>
<tr><td>2024</td><td>21826</td><td>2,515,48,49,720</td><td>346,22,09,274</td><td>267,70,38,977</td></tr>
<tr><td>2025 (ಜುಲೈ)</td><td>8222</td><td>1,287,50,89,854</td><td>109,36,47,238</td><td>48,90,14,780</td></tr>
</table></td></tr>
<tr><td>ಆ)</td><td>2024-25 ರಿಂದ ಸೈಬರ್ ವಂಚನೆಯ ಪ್ರಕರಣಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ವಂಚನೆಗಳ ತಡೆಗೆ ಸರ್ಕಾರ ಕೈಗೊಂಡ ಕ್ರಮಗಳೇನು;</td><td>ಹೌದು, ಗಮನಕ್ಕೆ ಬಂದಿರುತ್ತದೆ.<br><br>ವಂಚನೆ ತಡೆಗೆ ಕೈಗೊಂಡಿರುವ ಕ್ರಮಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.</td></tr>
<tr><td>ಇ)</td><td>ಸೈಬರ್ ವಂಚನೆಗೆ ಒಳಗಾದವರು ಗೋಲ್ಡನ್ ಅವರ್‌ನಲ್ಲಿ ದೂರು ದಾಖಲಿಸಿದಲ್ಲಿ ಆಗುವ ಪ್ರಯೋಜನವೇನು; ಎಷ್ಟು ಅವಧಿಯನ್ನು ಗೋಲ್ಡನ್ ಅವರ್ ಎಂದು ಕರೆಯುತ್ತಾರೆ;</td><td>"ಗೋಲ್ಡನ್ ಅವರ್" ಎಂದರೆ "ಸೈಬರ್ ವಂಚನೆಗೊಳಗಾದ ಹಣ ಬ್ಯಾಂಕ್ ಖಾತೆಗಳ ಮುಖಾಂತರ ಹರಿದು ಆರೋಪಿ ವಶಕ್ಕೆ ತಲುಪುವ ಸಮಯ" ಎಂದು ಹೇಳಲಾಗುತ್ತದೆ. ಇದು ಸೈಬರ್ ಅಪರಾಧ ಘಟಿಸಿದ ಮೊದಲ ಒಂದೆರಡು ಗಂಟೆಗಳು ಆಗಿರಬಹುದು ಅಥವಾ ಇದು ಪ್ರಕರಣದಿಂದ ಪ್ರಕರಣಕ್ಕೆ ಬದಲಾಗುತ್ತದೆ. ವಂಚನೆಗೆ ಒಳಗಾದ ಮೊತ್ತವನ್ನು ಬ್ಯಾಂಕ್ ಖಾತೆಗಳಲ್ಲಿ ತತಕ್ಷಣ ಕಾರ್ಯಪ್ರವೃತ್ತರಾಗಿ ತಡೆಹಿಡಿಯಲು ಇದು ಉಪಯೋಗವಾಗುತ್ತದೆ. ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.</td></tr>
<tr><td>ಈ)</td><td>ಸೈಬರ್ ಠಾಣೆಗಳ ಬಲವರ್ಧನೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;</td><td>ಸೈಬರ್ ಠಾಣೆಗಳ ಬಲವರ್ಧನೆಗೆ ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿದೆ:-<br>1. ವಿಶೇಷ ಸೈಬರ್ ಅಪರಾಧ ಪೊಲೀಸ್ ಘಟಕಗಳ ಸ್ಥಾಪನೆ</td></tr>
</table>

- ರಾಜ್ಯದಲ್ಲಿ DGP ಸೈಬರ್ ಕಮಾಂಡ್ ಹುದ್ದೆ ಸೃಜಿಸಲಾಗಿದೆ. ಇವರು ಸೈಬರ್ ಕ್ರೈಂ ಪೋಲಿಸ್ ಠಾಣೆಗಳ ಕಮಾಂಡಿಂಗ್ ಅಧಿಕಾರಿಯಾಗಿರುತ್ತಾರೆ. ಎಲ್ಲಾ ಸೈಬರ್ ಕ್ರೈಂ ಪೊಲೀಸ್ ಠಾಣೆಗಳು ನೇರವಾಗಿ ಇವರಿಗೆ ಕಾರ್ಯ ವರದಿ ಸಲ್ಲಿಸಿಕೊಂಡು ಕರ್ತವ್ಯ ನಿರ್ವಹಿಸುತ್ತಿರುತ್ತವೆ. ಈ ಕ್ರಮದಿಂದ ಸೈಬರ್ ಅಪರಾಧಗಳ ತನಿಖಾ ವೇಗ ಹೆಚ್ಚಾಲಿದೆ.
- ಕರ್ನಾಟಕ ರಾಜ್ಯದಲ್ಲಿ ಒಟ್ಟು 43 ಸೈಬರ್ ಕ್ರೈಂ ಪೊಲೀಸ್ ಠಾಣೆಗಳು (CCPS) ಕರ್ತವ್ಯ ನಿರ್ವಹಿಸುತ್ತಿವೆ. ಡಿವೈಎಸ್ಪಿ/ಎಸಿಪಿ ರವರು ಸೈಬರ್ ಕ್ರೈಂ ಪೊಲೀಸ್ ಠಾಣೆ SHO ಆಗಿರುತ್ತಾರೆ. ಈ ಠಾಣೆಗಳು ಸೈಬರ್ ಅಪರಾಧಗಳ ತನಿಖೆಗೆ ಮಾತ್ರ ಮೀಸಲಾಗಿರುತ್ತವೆ.
- ಭಾರತದ ಪ್ರಥಮ ವಿಶೇಷ ಸೈಬರ್ ಪೊಲೀಸ್ ಠಾಣೆಯನ್ನು 2001ರಲ್ಲಿ ಬೆಂಗಳೂರು ನಗರದಲ್ಲಿ ಸ್ಥಾಪಿಸಲಾಯಿತು.
- ಸಿಐಡಿ ಅಡಿಯಲ್ಲಿ ಸೈಬರ್ ಕ್ರೈಂ ವಿಭಾಗವು ರಾಜ್ಯದ ಸೈಬರ್ ಅಪರಾಧ ತನಿಖೆಗೆ ಕೇಂದ್ರ ಕಚೇರಿ ಆಗಿದ್ದು, ಗುಪ್ತಚರ ಹಂಚಿಕೆ ಹಾಗೂ ಇತರೆ ಘಟಕಗಳೊಂದಿಗೆ ಸಮನ್ವಯ ಮಾಡುತ್ತದೆ.

**2. ಸೈಬರ್ ಫಾರೆನ್ಸಿಕ್ ಸಾಮರ್ಥ್ಯ**

- ಡಿಜಿಟಲ್ ಫಾರೆನ್ಸಿಕ್ ಪ್ರಯೋಗಾಲಯಗಳು ಸೈಬರ್ ಅಪರಾಧಕ್ಕೆ ಸಂಬಂಧಿಸಿದ ಡಿಜಿಟಲ್ ಸಾಕ್ಷಿ ವಿಶ್ಲೇಷಣೆಗೆ ಸ್ಥಾಪಿಸಲಾಗಿದೆ.
- ಬೆಂಗಳೂರು ನಗರದಲ್ಲಿರುವ ರಾಜ್ಯ ಸೈಬರ್ ಫಾರೆನ್ಸಿಕ್ ಲ್ಯಾಬ್ ನಲ್ಲಿ ಮೊಬೈಲ್, ನೆಟ್‌ವರ್ಕ್, ಫಾರೆನ್ಸಿಕ್ ಹಾಗೂ ಮಾಲ್‌ವೇರ್ ವಿಶ್ಲೇಷಣಾ ಸಾಮರ್ಥ್ಯ, Magnet AXIOM, Belkasoft, Cellebrite UFED, Oxygen Forensic Detective ಮುಂತಾದ ಅತ್ಯಾಧುನಿಕ ಸಾಧನಗಳು ಪ್ರಾದೇಶಿಕ ಫಾರೆನ್ಸಿಕ್ ಲ್ಯಾಬ್‌ಗಳು ಸ್ಥಳೀಯ ತನಿಖಾ ಸಾಮರ್ಥ್ಯವನ್ನು ಬಲಪಡಿಸುತ್ತವೆ. ಡೇಟಾ ರಿಕವರಿ, ಸಾಧನ ಇಮೇಜಿಂಗ್, ಸಾಕ್ಷಿ ಕಸ್ಟಡಿ ನಿರ್ವಹಣೆ ಮಾಡಲಾಗುತ್ತಿದೆ.

**3. ಕೇಂದ್ರ ಮಟ್ಟದ ಸಂಯೋಜನೆ ಮತ್ತು ಮೇಲ್ವಿಚಾರಣೆ**

- ಭಾರತೀಯ ಸೈಬರ್ ಕ್ರೈಂ ಸಂಯೋಜನಾ ಕೇಂದ್ರ (I4C) ರಾಷ್ಟ್ರ ಮಟ್ಟದ ಸಾಮರ್ಥ್ಯ ನಿರ್ಮಾಣ, ಭೀತಿಯ ವಿಶ್ಲೇಷಣೆ ಹಾಗೂ ಕಾನೂನು ಅನುಷ್ಠಾನ ಬೆಂಬಲ ನೀಡುತ್ತದೆ.
- CERT-In (Computer Emergency Response Team – India) ಸೈಬರ್ ಬೆದರಿಕೆಗಳ ಬಗ್ಗೆ ಎಚ್ಚರಿಕೆ ನೀಡುತ್ತದೆ, ಘಟನಾವಳಿಗಳನ್ನು ನಿರ್ವಹಿಸುತ್ತದೆ.
- Cyber Swachhata Kendra ಮಾಲ್‌ವೇರ್ ಹಾಗೂ ಬಾಟ್‌ನೆಟ್ ಸೋಂಕು ಪತ್ತೆ ಮಾಡಿ ತೆರವುಗೊಳಿಸಲು ಸಹಾಯ ಮಾಡುತ್ತದೆ.
- NCIIPC (National Critical Information Infrastructure Protection Centre) ಬ್ಯಾಂಕಿಂಗ್, ಟೆಲಿಕಾಂ, ಇಂಧನ ಹಾಗೂ

| | | |
|---|---|---|
| | | ರಕ್ಷಣಾ ಮೂಲಸೌಕರ್ಯವನ್ನು ರಕ್ಷಿಸುವ ಸಂಬಂಧ ಕ್ರಮ ಕೈಗೊಳ್ಳಲಾಗುತ್ತಿದೆ.<br>**4. ಸಾಮರ್ಥ್ಯ ವೃದ್ಧಿ ಮತ್ತು ತರಬೇತಿ**<br>❖ ಪೊಲೀಸ್ ಅಧಿಕಾರಿಗಳು ಹಾಗೂ ಸಾರ್ವಜನಿಕ ಅಭಿಯೋಜಕರಿಗೆ ಸೈಬರ್ ಕಾನೂನು, ಡಿಜಿಟಲ್ ತನಿಖೆ, ಎಲೆಕ್ಟ್ರಾನಿಕ್ ಸಾಕ್ಷಿಗಳ ಕಾನೂನುಬದ್ಧತೆ ಕುರಿತಂತೆ ನಿಯಮಿತ ತರಬೇತಿ ನೀಡಲಾಗುತ್ತಿದೆ.<br>❖ 2024ರಲ್ಲಿ 257ಕ್ಕೂ ಹೆಚ್ಚು ಅಧಿಕಾರಿಗಳು 1,367 ಸೈಬರ್ ಫಾರೆನ್ಸಿಕ್ ಪ್ರಕರಣಗಳನ್ನು ನಿರ್ವಹಿಸಲು ತರಬೇತಿ ನೀಡಲಾಗುತ್ತಿದೆ.<br>❖ NASSCOM, DSCI, CERT-In ಸಹಯೋಗದೊಂದಿಗೆ ವಿಶೇಷ ತರಬೇತಿ ಪಡೆಯಲಾಗುತ್ತಿದೆ.<br>❖ 2019ರಲ್ಲಿ ಸ್ಥಾಪಿತ CCITR (Centre for Cybercrime Investigation Training & Research) ಡಾರ್ಕ್ ವೆಬ್, ಕ್ರಿಪ್ಟೋ ಕರೆನ್ಸಿ ಅಪರಾಧಗಳಲ್ಲಿ ಪರಿಣಿತಿ ತರಬೇತಿ ನೀಡಲಾಗುತ್ತಿದೆ. |
| ಉ) | ಸೈಬರ್ ಅಪರಾಧ ಸಹಾಯವಾಣಿಗೆ ಕರೆಗಳ ಸಂಖ್ಯೆ ಹೆಚ್ಚಾಗಿರುವುದು ಕಾರಣ ಗೋಲ್ಡನ್ ಅವರ್‌ನಲ್ಲಿ ದೂರು ನೀಡಲು ಸಾಧ್ಯವಾಗದೆ ಸಾರ್ವಜನಿಕರಿಗೆ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದರ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮವೇನು; | ಹೌದು, ಗಮನಕ್ಕೆ ಬಂದಿರುತ್ತದೆ.<br><br>**ಸೈಬರ್ ಅಪರಾಧ ಸಹಾಯವಾಣಿಗೆ ಕರೆಗಳ ಸಂಖ್ಯೆ ಹೆಚ್ಚಾಗಿರುವುದು ಕಾರಣ ಗೋಲ್ಡನ್ ಅವರ್‌ನಲ್ಲಿ ದೂರು ನೀಡಲು ಸಾಧ್ಯವಾಗದೆ ಸಾರ್ವಜನಿಕರಿಗೆ ಉಂಟಾಗುತ್ತಿರುವ ತೊಂದರೆ ನಿವಾರಿಸಲು ಕೈಗೊಂಡ ಕ್ರಮಗಳು ಈ ಕೆಳಕಂಡಂತಿದೆ:-**<br>1. ಸೈಬರ್ ಅಪರಾಧ ಸಹಾಯವಾಣಿಗಳಿಗೆ "ಗೋಲ್ಡನ್ ಅವರ್" ನಲ್ಲಿ ಬರುವ ದೂರಗಳನ್ನು ಸ್ವೀಕರಿಸಲು ಕರ್ನಾಟಕ ಪೊಲೀಸ್ ಇಲಾಖೆ 1930 ಹೆಲ್ಪ್‌ಲೈನ್ ಅನ್ನು ವೆಬ್‌ಬಾಟ್ ಸೌಲಭ್ಯದಿಂದ ಉನ್ನತೀಕರಿಸಿದೆ. ಇದರಿಂದ SMS ಮುಖಾಂತರ ಸ್ವಯಂ ಮಾಹಿತಿ ನೋಂದಣಿ ಮಾಡಬಹುದು.<br>2. ದೂರುಗಳನ್ನು ಹಣಕಾಸು ಮತ್ತು ಹಣಕಾಸೇತರವಾಗಿ ವಿಂಗಡಿಸುವ IVR ವ್ಯವಸ್ಥೆ ಕಲ್ಪಿಸಲಾಗಿರುತ್ತದೆ. ಆಟೋಮೇಟೆಡ್ ಕರೆ ವ್ಯವಸ್ಥೆ– ಹೆಚ್ಚು ಕರೆ ಬಂದಾಗ ಧ್ವನಿ ಮಾರ್ಗದರ್ಶನ ಸೌಲಭ್ಯವಿರುತ್ತದೆ.<br>3. ದೂರುದಾರರು ತಮ್ಮ ದೂರಿನ ಸ್ಥಿತಿ ಹಂತವನ್ನು ತಿಳಿದುಕೊಳ್ಳಬಹುದಾಗಿರುತ್ತದೆ. 24/7 ಕಾಲ್ ಸೆಂಟರ್ ಕರ್ತವ್ಯ ನಿರ್ವಹಿಸುತ್ತಿರುತ್ತದೆ. ಕಾಲ್ ಟೇಕರ್ಸ್ ಗಳು ಪ್ರತಿದಿನ ಮೂರು ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ. |
| ಊ) | ಸೈಬರ್ ವಂಚನೆಯ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? | **ಸಾರ್ವಜನಿಕರಿಗೆ ಸೈಬರ್ ವಂಚನೆಗಳ ಬಗ್ಗೆ ಜಾಗೃತಿ ಮೂಡಿಸಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ:-**<br>❖ ರೇಡಿಯೋ, ಟಿವಿ, ಸಾಮಾಜಿಕ ಜಾಲತಾಣಗಳ ಮೂಲಕ OTP ಸುರಕ್ಷತೆ, ವಂಚನೆ, ಎಚ್ಚರಿಕೆ, ಡಿಜಿಟಲ್ ಹೈಜಿನ್ ಕುರಿತು ಪ್ರಚಾರ ಮಾಡಲಾಗುತ್ತಿದೆ. |

| | | |
|---|---|---|
| | | ❖ ಸಮುದಾಯ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸುವ "ಮನೆ ಮನೆಗೆ ಪೊಲೀಸ್" ಕಾರ್ಯಕ್ರಮ ದಡಿಯಲ್ಲಿ ಸಕ್ರಿಯ ಸೇವೆ ಮುಖಾಂತರ ಸೈಬರ್ ಜಾಗೃತಿ ಮೂಡಿಸಲಾಗುತ್ತಿದೆ.<br>❖ ಪ್ರಮುಖ ಮೊಬೈಲ್ ಸರ್ವೀಸ್ ಪ್ರೊವೈಡರ್‌ಗಳ ಮುಖಾಂತರ ಕರೆಗಳು ಸ್ವೀಕರಿಸುವ ಮೊದಲು ಸೈಬರ್ ಅಪರಾಧಗಳ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ.<br>❖ ರೈಲ್ವೆ ನಿಲ್ದಾಣ ಗಳಲ್ಲಿ ಪೋಸ್ಟರ್ ಮತ್ತು ವಿಡಿಯೋ ಮೂಲಕ ಸೈಬರ್ ಜಾಗೃತಿ ಮೂಡಿಸಲಾಗುತ್ತಿದೆ.<br>❖ ಹೊಸ ಮಾದರಿಯ ಆನ್-ಲೈನ್, ಸೈಬರ್ ವಂಚನೆಗಳ ತ್ವರಿತ ಮತ್ತು ತಾರ್ಕಿಕ ತನಿಖೆಯನ್ನು ಕೈಗೊಳ್ಳುವ ಸಲುವಾಗಿ ತನಿಖಾ ಕೈಪಿಡಿಯನ್ನು (New Cyber Investigation manual) ಪ್ರಕಟಿಸಲಾಗಿದೆ.<br>❖ ಸೈಬರ್ ಅಪರಾಧಗಳನ್ನು ನಿಯಂತ್ರಿಸಲು ಸಾರ್ವಜನಿಕರಲ್ಲಿ ಮ್ಯೂಲ್ ಅಕೌಂಟ್ ಪರಿಣಾಮಗಳ ಬಗ್ಗೆ ಹಾಗೂ ಕಾನೂನು ಕ್ರಮಗಳ ಬಗ್ಗೆ ಜಾಗೃತಿ ಮೂಡಿಲಾಗುತ್ತಿದೆ.<br>❖ ಸಾಮಾಜಿಕ ಜಾಲತಾಣಗಳಾದ ವಾಟ್ಸ್‌ಆಪ್, ಫೇಸ್‌ಬುಕ್, ಟ್ವಿಟರ್, ಇನ್‌ಸ್ಟಾಗ್ರಾಮ್, ಟೆಲಿಗ್ರಾಂ ಹಾಗೂ ಇತರೆ ಜಾಲತಾಣಗಳಲ್ಲಿ ಐಟಿ ಕಾಯ್ದೆ ಮತ್ತು ಐಟಿ ನಿಯಮಗಳನ್ನು ಉಲ್ಲಂಘಿಸುವ ಮತ್ತು ಸೈಬರ್ ಅಪರಾಧದಲ್ಲಿ ಭಾಗಿಯಾಗಿರುವ/ಭಾಗಿಯಾಗಬಹುದಾದ ಪೋಸ್ಟ್‌ಗಳನ್ನು ನಿಯಮಾನುಸಾರ ನೋಟೀಸ್ ಜಾರಿ ಮಾಡಿ ಜಾಲತಾಣದಿಂದ ತೆಗೆದುಹಾಕುವ ಕ್ರಮಗಳನ್ನು ಕೇಂದ್ರ ಮತ್ತು ರಾಜ್ಯದ ಸಹಭಾಗಿತ್ವ ಸಂಸ್ಥೆಗಳ ಸಮನ್ವಯದೊಂದಿಗೆ ಕೈಗೊಳ್ಳಲಾಗುತಿದೆ.<br>❖ ಸೈಬರ್ ಗುಪ್ತಚರ ಮಾಹಿತಿ ವಿನಿಮಯ, ತತಕ್ಷಣ ಬ್ಯಾಂಕ್ ವಂಚನೆ ಮೊತ್ತ ಸ್ಥಗಿತಗೊಳಿಸಲು, ಜಂಟಿಯಾಗಿ ಸೈಬರ್ ವಂಚನೆ ಮತ್ತು ಬೆದರಿಕೆಗೆ ಪ್ರತಿಕ್ರಿಯಿಸಲು ಮತ್ತು ಜಾಗೃತಿ ಮೂಡಿಸಲು ಐಟಿ ಕಂಪನಿಗಳು, ಬ್ಯಾಂಕುಗಳು, ಪೇಮೆಂಟ್ ಸರ್ವಿಸ್ ಪೂರೈಕೆದಾರರೊಂದಿಗೆ MoU ಗಳನ್ನು ಮಾಡಿಕೊಳ್ಳಲಾಗಿದೆ |

ಸಂಖ್ಯೆ: ಹೆಚ್‌ಡಿ 71 ಪಿಸಿಕ್ಯೂ 2025

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು

ಅನುಬಂಧ

## ಸೈಬರ್ ಅಪರಾಧ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕ್ರಮಗಳು:-

### 1. ಆನ್‌ಲೈನ್ ದೂರು ನೋಂದಣಿ ವ್ಯವಸ್ಥೆಗಳು

- ರಾಷ್ಟ್ರೀಯ ಸೈಬರ್ ಕ್ರೈಂ ವರದಿ ಪೋರ್ಟಲ್ (NCRP) www.cybercrime.gov.in ಮೂಲಕ ನಾಗರಿಕರು ಸೈಬರ್ ಅಪರಾಧಗಳನ್ನು ಆನ್‌ಲೈನ್‌ನಲ್ಲಿ ವರದಿ ಮಾಡಿ, ದೂರುಗಳ ಸ್ಥಿತಿಯನ್ನು ತಿಳಿಯಬಹುದಾಗಿರುತ್ತದೆ.
- 1930 ರಾಷ್ಟ್ರೀಯ ಹೆಲ್ಪ್‌ಲೈನ್ ಮೂಲಕ ಆರ್ಥಿಕ ವಂಚನೆಗಳನ್ನು ಉಚಿತವಾಗಿ ತಕ್ಷಣ ವರದಿ ಮಾಡಿ, NCRP ಪೋರ್ಟಲ್‌ನಲ್ಲಿ ದೂರು ದಾಖಲಿಸಲು ಸಹಾಯ ಪಡೆಯಬಹುದು.
- ಸಾರ್ವಜನಿಕರಲ್ಲಿ 1930 ಹೆಲ್ಪ್‌ಲೈನ್ ಹಾಗೂ NCRP ಬಳಕೆಯನ್ನು ಉತ್ತೇಜಿಸಲು ಜಾಗೃತಿ ಅಭಿಯಾನಗಳು ನಡೆಸಲಾಗುತ್ತಿದೆ.

### 2. ವಿಶೇಷ ಸೈಬರ್ ಅಪರಾಧ ಪೊಲೀಸ್ ಘಟಕಗಳು ಸ್ಥಾಪನೆ

- ರಾಜ್ಯದಲ್ಲಿ DGP ಸೈಬರ್ ಕಮಾಂಡ್ ಹುದ್ದೆ ಸೃಜಿಸಲಾಗಿದೆ. ಇವರು ಸೈಬರ್ ಕ್ರೈಂ ಪೋಲಿಸ್ ಠಾಣೆಗಳ ಕಮಾಂಡಿಂಗ್ ಅಧಿಕಾರಿಯಾಗಿರುತ್ತಾರೆ. ಎಲ್ಲಾ ಸೈಬರ್ ಕ್ರೈಂ ಪೊಲೀಸ್ ಠಾಣೆಗಳು ನೇರವಾಗಿ ಇವರಿಗೆ ಕಾರ್ಯ ವರದಿ ಸಲ್ಲಿಸಿಕೊಂಡು ಕರ್ತವ್ಯ ನಿರ್ವಹಿಸುತ್ತಿರುತ್ತವೆ. ಈ ಕ್ರಮದಿಂದ ಸೈಬರ್ ಅಪರಾಧಗಳ ತನಿಖಾ ವೇಗ ಹೆಚ್ಚಲಿದೆ.
- ಕರ್ನಾಟಕ ರಾಜ್ಯದಲ್ಲಿ ಒಟ್ಟು 43 ಸೈಬರ್ ಕ್ರೈಂ ಪೊಲೀಸ್ ಠಾಣೆಗಳು (CCPS) ಕರ್ತವ್ಯ ನಿರ್ವಹಿಸುತ್ತಿವೆ. ಡಿವೈಎಸ್ಪಿ/ಎಸಿಪಿ ರವರು ಸೈಬರ್ ಕ್ರೈಂ ಪೊಲೀಸ್ ಠಾಣೆಗಳ SHO ಆಗಿರುತ್ತಾರೆ. ಈ ಠಾಣೆಗಳು ಸೈಬರ್ ಅಪರಾಧಗಳ ತನಿಖೆಗೆ ಮಾತ್ರ ಮೀಸಲಾಗಿರುತ್ತವೆ.
- ಭಾರತದ ಪ್ರಥಮ ವಿಶೇಷ ಸೈಬರ್ ಪೊಲೀಸ್ ಠಾಣೆಯನ್ನು 2001ರಲ್ಲಿ ಬೆಂಗಳೂರು ನಗರದಲ್ಲಿ ಸ್ಥಾಪಿಸಲಾಯಿತು.
- ಸಿಐಡಿ ಅಡಿಯಲ್ಲಿ ಸೈಬರ್ ಕ್ರೈಂ ವಿಭಾಗವು ರಾಜ್ಯದ ಸೈಬರ್ ಅಪರಾಧ ತನಿಖೆಗೆ ಕೇಂದ್ರ ಕಚೇರಿ ಆಗಿದ್ದು, ಗುಪ್ತಚರ ಹಂಚಿಕೆ ಹಾಗೂ ಇತರೆ ಘಟಕಗಳೊಂದಿಗೆ ಸಮನ್ವಯ ಮಾಡುತ್ತದೆ.

### 3. ಸೈಬರ್ ಫರೆನ್ಸಿಕ್ ಸಾಮರ್ಥ್ಯ

- ಡಿಜಿಟಲ್ ಫಾರೆನ್ಸಿಕ್ ಪ್ರಯೋಗಾಲಯಗಳು ಸೈಬರ್ ಅಪರಾಧಕ್ಕೆ ಸಂಬಂಧಿಸಿದ ಡಿಜಿಟಲ್ ಸಾಕ್ಷಿ ವಿಶ್ಲೇಷಣೆಗೆ ಸ್ಥಾಪಿಸಲಾಗಿದೆ.
- ಬೆಂಗಳೂರು ನಗರದಲ್ಲಿರುವ ರಾಜ್ಯ ಸೈಬರ್ ಫಾರೆನ್ಸಿಕ್ ಲ್ಯಾಬ್‌ನಲ್ಲಿ: ಮೊಬೈಲ್, ನೆಟ್ವರ್ಕ್ ಫಾರೆನ್ಸಿಕ್ಸ್ ಹಾಗೂ ಮಾಲ್‌ವೇರ್ ವಿಶ್ಲೇಷಣಾ ಸಾಮರ್ಥ್ಯ, Magnet AXIOM, Belkasoft, Cellebrite UFED, Oxygen Forensic Detective ಮುಂತಾದ ಅತ್ಯಾಧುನಿಕ ಸಾಧನಗಳು ಪ್ರಾದೇಶಿಕ ಫಾರೆನ್ಸಿಕ್ ಲ್ಯಾಬ್‌ಗಳು ಸ್ಥಳೀಯ ತನಿಖಾ ಸಾಮರ್ಥ್ಯವನ್ನು ಬಲಪಡಿಸುತ್ತವೆ. ಡೇಟಾ ರಿಕವರಿ, ಸಾಧನ ಇಮೇಜಿಂಗ್, ಸಾಕ್ಷಿ ಕಸ್ಟಡಿ ನಿರ್ವಹಣೆ ಮಾಡಲಾಗುತ್ತಿದೆ.

### 4. ಕೇಂದ್ರ ಮಟ್ಟದ ಸಂಯೋಜನೆ ಮತ್ತು ಮೇಲ್ವಿಚಾರಣೆ

- ಭಾರತೀಯ ಸೈಬರ್ ಕ್ರೈಂ ಸಂಯೋಜನಾ ಕೇಂದ್ರ (I4C) ರಾಷ್ಟ್ರ ಮಟ್ಟದ ಸಾಮರ್ಥ್ಯ ನಿರ್ಮಾಣ, ಭೀತಿಯ ವಿಶ್ಲೇಷಣೆ ಹಾಗೂ ಕಾನೂನು ಅನುಷ್ಠಾನದ ಬೆಂಬಲ ನೀಡುತ್ತದೆ.
- CERT-In (Computer Emergency Response Team – India) ಸೈಬರ್ ಬೆದರಿಕೆಗಳ ಬಗ್ಗೆ ಎಚ್ಚರಿಕೆ ನೀಡುತ್ತದೆ, ಘಟನಾವಳಿಗಳನ್ನು ನಿರ್ವಹಿಸುತ್ತದೆ.
- Cyber Swachhata Kendra ಮಾಲ್‌ವೇರ್ ಹಾಗೂ ಬಾಟ್‌ನೆಟ್ ಸೋಂಕು ಪತ್ತೆಮಾಡಿ ತೆರವುಗೊಳಿಸಲು ಸಹಾಯ ಮಾಡುತ್ತದೆ.
- NCIIPC (National Critical Information Infrastructure Protection Centre) ಬ್ಯಾಂಕಿಂಗ್, ಟೆಲಿಕಾಂ, ಇಂಧನ ಹಾಗೂ ರಕ್ಷಣಾ ಮೂಲಸೌಕರ್ಯವನ್ನು ರಕ್ಷಿಸುವ ಸಂಬಂಧ ಕ್ರಮ ಕೈಗೊಳ್ಳಲಾಗುತ್ತಿದೆ.

**5. ಸಾಮರ್ಥ್ಯ ವೃದ್ಧಿ ಮತ್ತು ತರಬೇತಿ**

- ಪೊಲೀಸ್ ಅಧಿಕಾರಿಗಳು ಹಾಗೂ ಸಾರ್ವಜನಿಕ ಅಭಿಯೋಜಕರಿಗೆ ಸೈಬರ್ ಕಾನೂನು, ಡಿಜಿಟಲ್ ತನಿಖೆ, ಎಲೆಕ್ಟ್ರಾನಿಕ್ ಸಾಕ್ಷಿಗಳ ಕಾನೂನು ಬದ್ಧತೆ ಕುರಿತಂತೆ ನಿಯಮಿತ ತರಬೇತಿ ನೀಡಲಾಗುತ್ತಿದೆ.
- 2024ರಲ್ಲಿ 257 ಕ್ಕೂ ಹೆಚ್ಚು ಅಧಿಕಾರಿಗಳು 1,367 ಸೈಬರ್ ಫಾರೆನ್ಸಿಕ್ ಪ್ರಕರಣಗಳನ್ನು ನಿರ್ವಹಿಸಲು ತರಬೇತಿ ನೀಡಲಾಗುತ್ತಿದೆ.
- NASSCOM, DSCI, CERT-In ಸಹಯೋಗದೊಂದಿಗೆ ವಿಶೇಷ ತರಬೇತಿ ಪಡೆಯಲಾಗುತ್ತಿದೆ..
- 2019ರಲ್ಲಿ ಸ್ಥಾಪಿತ CCITR (Centre for Cybercrime Investigation Training & Research) ಡಾರ್ಕ್ ವೆಬ್, ಕ್ರಿಪ್ಟೋಕರೆನ್ಸಿ ಅಪರಾಧಗಳಲ್ಲಿ ಪರಿಣತಿ ತರಬೇತಿ ನೀಡಲಾಗುತ್ತಿದೆ.

**6. ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳು**

- ರೇಡಿಯೋ, ಟಿವಿ, ಸಾಮಾಜಿಕ ಜಾಲತಾಣಗಳ ಮೂಲಕ OTP ಸುರಕ್ಷತೆ, ವಂಚನೆ ಎಚ್ಚರಿಕೆ, ಡಿಜಿಟಲ್ ಹೈಜಿನ್ ಕುರಿತು ಪ್ರಚಾರ ಮಾಡಲಾಗುತ್ತಿದೆ.
- ಸಮುದಾಯ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸುವ "ಮನೆ ಮನೆಗೆ ಪೊಲೀಸ್" ಕಾರ್ಯಕ್ರಮ ದಡಿಯಲ್ಲಿ ಸಕ್ರಿಯ ಸೇವೆ ಮುಖಾಂತರ ಸೈಬರ್ ಜಾಗೃತಿ ಮೂಡಿಸಲಾಗುತ್ತಿದೆ.
- ಪ್ರಮುಖ ಮೊಬೈಲ್ ಸರ್ವೀಸ್ ಪ್ರೊವೈಡರ್‌ಗಳ ಮುಖಾಂತರ ಕರೆಗಳು ಸ್ವೀಕರಿಸುವ ಮೊದಲು ಸೈಬರ್ ಅಪರಾಧಗಳ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ.
- "ಗೋಲ್ಡನ್ ಅವರ್" ಎಂದರೆ ಸೈಬರ್ ವಂಚನೆಗೊಳಗಾದ ಹಣ ಬ್ಯಾಂಕ್ ಖಾತೆಗಳ ಮುಖಾಂತರ ಹರಿದು ಆರೋಪಿ ವಶಕ್ಕೆ ತಲುಪುವ ಸಮಯ" ಎಂದು ಹೇಳಲಾಗುತ್ತದೆ. ಇದು ಪ್ರಕರಣದಿಂದ ಪ್ರಕರಣಕ್ಕೆ ಬದಲಾಗುತ್ತದೆ . ವಂಚನೆ ಒಳಗಾದ ಮೊತ್ತವನ್ನು ಬ್ಯಾಂಕ್ ಖಾತೆಗಳಲ್ಲಿ ತತಕ್ಷಣ ಕಾರ್ಯಪ್ರವೃತ್ತರಾಗಿ ತಡೆಹಿಡಿಯಲು "ಗೋಲ್ಡನ್ ಅವರ್" ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.

**7. ಸಹಯೋಗ ಮತ್ತು ಪಾಲುದಾರಿಕೆಗಳು**

- ಸೈಬರ್ ಗುಪ್ತಚರ ಮಾಹಿತಿ ವಿನಿಮಯ, ತತಕ್ಷಣ ಬ್ಯಾಂಕ್ ವಂಚನೆ ಮೊತ್ತ ಸ್ಥಗಿತಗೊಳಿಸಲು,. ಜಂಟಿಯಾಗಿ ಸೈಬರ್ ವಂಚನೆ ಮತ್ತು ಬೆದರಿಕೆಗೆ ಪ್ರತಿಕ್ರಿಯಿಸಲು ಮತ್ತು ಜಾಗೃತಿ ಮೂಡಿಸಲು ಐಟಿ ಕಂಪನಿಗಳು, ಬ್ಯಾಂಕುಗಳು, ಪೇಮೆಂಟ್ ಸರ್ವಿಸ್ ಪೂರೈಕೆದಾರರೊಂದಿಗೆ MoU ಗಳನ್ನು ಮಾಡಿಕೊಳ್ಳಲಾಗಿದೆ.

**8. ತಡೆಗಟ್ಟುವ ಮೇಲ್ವಿಚಾರಣೆ**

- OSINT ಉಪಕರಣಗಳ ಮೂಲಕ ಹೊಸ ಸೈಬರ್ ಅಪಾಯಗಳ ಕುರಿತು ನಿಗಾ ವಹಿಸಲಾಗಿದೆ.
- ಸಾಮಾಜಿಕ ಜಾಲತಾಣಗಳಲ್ಲಿ ಬಿತ್ತರಿಸಲಾಗುವ ಕಾನೂನು ಬಾಹಿರ ವಿಡಿಯೋ, ಫೋಟೋಗಳನ್ನು ತೆಗೆಯಲು IT ಕಾಯ್ದೆಯಡಿ ಕ್ರಮ ಜರುಗಿಸಲಾಗುತ್ತಿದೆ.
- ಸೈಬರ್ ಅಪರಾಧ ಸಹಾಯವಾಣಿಗಳಿಗೆ "ಗೋಲ್ಡನ್ ಅವರ್" ನಲ್ಲಿ ಬರುವ ದೂರುಗಳನ್ನು ಸ್ವೀಕರಿಸಲು ಕರ್ನಾಟಕ ಪೊಲೀಸ್ ಇಲಾಖೆ 1930 ಹೆಲ್ಪ್‌ಲೈನ್ ಅನ್ನು ವೆಬ್‌ಬಾಟ್ ಸೌಲಭ್ಯದಿಂದ ಉನ್ನತೀಕರಿಸಿದೆ. ಇದರಿಂದ SMS ಮುಖಾಂತರ ಸ್ವಯಂ ಮಾಹಿತಿ ನೋಂದಣಿ ಮಾಡಿಕೊಳ್ಳಬಹುದಾಗಿರುತ್ತದೆ. ದೂರುಗಳನ್ನು "ಹಣಕಾಸು ಮತ್ತು ಹಣಕಾಸೇತರ" ಎಂದು ವಿಂಗಡಿಸುವ IVR ವ್ಯವಸ್ಥೆ ಕಲ್ಪಿಸಲಾಗಿರುತ್ತದೆ. ಹೆಚ್ಚು ಕರೆಗಳು ಬಂದಾಗ ಆಟೋಮೇಟೆಡ್ ಕರೆ ವ್ಯವಸ್ಥೆ ಮೂಲಕ ಧ್ವನಿ ಮಾರ್ಗದರ್ಶನ ಸೌಲಭ್ಯವಿರುತ್ತದೆ. ದೂರುದಾರರು ತಮ್ಮ ದೂರಿನ ಸ್ಥಿತಿ ಹಂತವನ್ನು ತಿಳಿದುಕೊಳ್ಳಬಹುದಾಗಿರುತ್ತದೆ. ಕಾಲ್ ಸೆಂಟರ್‌ಗಳು 24/7 ಕರ್ತವ್ಯ ನಿರ್ವಹಿಸುತ್ತಿರುತ್ತದೆ. ಕರೆ ಸ್ವೀಕರಿಸುವ ಸಿಬ್ಬಂದಿಗಳು ಪ್ರತಿದಿನ ಮೂರು ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ.